ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. RW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ೦ಃ 30.08.2025

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ನಾನು ಡಿಪ್ಲಮೋ ಅರ್ಧದವರೆಗೂ ಓದಿರುತ್ತೇನೆ. ನಿಮ್ಮ ಮದುವೆಯಾದಾಗ ನೀವು ಶ್ರೀರಂಗಪಟ್ಟಣದಲ್ಲಿ ನಿಮ್ಮ ಸ್ವಂತ ಮನೆಯಲ್ಲಿ ನಿಮ್ಮ ತಂದೆಯ ಜೊತೆಯಲ್ಲಿ ವಾಸವಾಗಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೊಗರಹಳ್ಳಿ ಮಂಟಿ ಗ್ರಾಮದಲ್ಲಿ ವಾಸವಾಗಿದ್ದೆನು ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ನಿವೃತ್ತ railway ನೌಕರರು ಇರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಪಿಂಚಣಿ ಬರುತ್ತದೆ ಎಂದರೆ ಸರಿ.

ಮದುವೆ ಸಂದರ್ಬದಲ್ಲಿ ಅರ್ಜಿದಾರರ ಕುಟುಂಬದವರು ಸಾಕಷ್ಟು ವರೋಪಚಾರ ಹಾಗೂ ಉಡುಗೊರೆಗಳನ್ನು ನೀಡಿದ್ದರು ಸಹಾ ನೀಡಿಲ್ಲ ಎಂದು ನನ್ನ ತಕರಾರಿನಲ್ಲಿ ತಿಳಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರ ಕುಟುಂಬದವರು ಸಾಕಷ್ಟು ವರೋಪಚಾರ ಹಾಗೂ ಉಡುಗೊರೆಗಳನ್ನು ನೀಡಿದ್ದರು ಸಹಾ ನನ್ನ ತಂದೆ ತಾಯಿಯವರು ಹೆಚ್ಚಿನ ವರದಕ್ಷಿಣೆ ತರಲು ನನಗೆ ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರ ತಂದೆಯವರು ಸ್ಥಿತಿವಂತರಲ್ಲ ಎಂದೂ ಹಾಗೂ ಹೆಚ್ಚಿನ ವರದಕ್ಷಿಣೆ ನೀಡಲು ಸಾಧ್ಯವಿಲ್ಲವೆಂದು ನನಗೆ ಮನವರಿಕೆ ಮಾಡಿಕೊಟ್ಟರು ಸಹಾ ನಾನು ಹಾಗೂ ನನ್ನ ತಂದೆ ತಾಯಿಯರು ಅರ್ಜಿದಾರರಿಗೆ ಕಿರುಕುಳ ನೀಡುತ್ತಿದ್ದೆವು ಎಂದರೆ ಸರಿಯಲ್ಲ. ನಾವೆಲ್ಲರೂ ಅರ್ಜಿದಾರರಿಗೆ ಅಷ್ಟು ಕಿರುಕುಳ ನೀಡಿದ್ದರೂ ಸಹಾ ಇಂದಲ್ಲ ನಾಳೆ ಸರಿಹೋಗಬಹುದು ಎಂದು ನನ್ನ ಜೊತೆ ಜೀವನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅರ್ಜಿದಾರರು ವರದಕ್ಷಿಣೆ ತರಲಿಲ್ಲ ಎಂದು ನಾನು ಅವರಿಗೆ ಹಲ್ಲೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿಸಿದಂತೆ ಊರಿನಲ್ಲಿ ರಾಜಿ ಪಂಚಾಯಿತಿ ಆಗಿತ್ತು ಎಂದರೆ ಸರಿ.

ರಾಜಿ ಫಲಪ್ರದ ಅಗದೆ ಇರುವ ಕಾರಣ ಅರ್ಜಿದಾರರು ಕೆ.ಆರ್.ಎಸ್ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಪೊಲೀಸರು ನನ್ನನ್ನು ಹಾಗೂ ನನ್ನ ತಂದೆ ತಾಯಿಯರನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಆಗ ಹಿರಿಯರ ಸಲಹೆಯಂತೆ ಅರ್ಜಿದಾರರನ್ನು ಜೀವನ ಮಾಡುವ ಸಲುವಾಗಿ ನಮ್ಮ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಅರ್ಜಿದಾರರಿಗೆ ಹಲ್ಲೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಂತರ ಅರ್ಜಿದಾರರು ಮತ್ತೊಮ್ಮೆ ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. CC No.509/2021 ರಂತೆ ಪ್ರಕರಣವು ನನ್ನ ಹಾಗೂ ನನ್ನ ತಂದೆ ತಾಯಿ ವಿರುದ್ಧ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣವು ಪ್ರಸ್ತುತ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಅರ್ಜಿದಾರರು ಈಗಲೂ ಸಹಾ ಅವರ ತಂದೆಯ ಮನೆಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ಅರ್ಜಿದಾರರ ಜೀವನೋಪಾಯಕ್ಕೆ ನೀವೇನಾದರೂ ವ್ಯವಸ್ಥೆ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹಾ ಅರ್ಜಿದಾರರು ಅನುಕಂಪದ ಆಧಾರದ ಮೇಲೆ ಅವರ ತಂದೆಯ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಅರ್ಜಿದಾರರೇ ಒಂದುಬ್ಯೂಟಿ ಪಾರ್ಲರ್ ಅಂಗಡಿಯನ್ನು ಇಟ್ಟುಕೊಂಡು ದುಡಿಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಅರ್ಜಿದಾರರು ಯಾವುದೇ ರೀತಿ ಬ್ಯೂಟಿ ಪಾರ್ಲರ್ ಅನ್ನು ಇಟ್ಟು ಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಉದ್ಯೋಗ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತಿಂಗಳಿಗೆ ಊಟ ವಸತಿ ಹಾಗೂ ಇತರೆ ಖರ್ಚುಗಳಿಗಾಗಿ ರೂ.10,000/-ಗಳ ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರೂ.10,000/- ಗಳನ್ನು ಭರಿಸುವ ಸಾಮರ್ಥ್ಯ ನನಗೆ ಇರುತ್ತದೆ ಎಂದರೆ ಸರಿಯಲ್ಲ.

ನಿಪಿ.3 ರಂತೆ ನನಗೆ ಸೇರಿದ Electric contractor license ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಯಾವುದೇ Electric contract ಕೆಲಸ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಸಾಕಷ್ಟು ಆದಾಯ ಇದ್ದರೂ ಸಹಾ ಕಾಂಟ್ರಕ್ಟ್ ಕೆಲಸ ಮಾಡಿಸುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಗರಹಳ್ಳಿ ಮಂಟಿಯಲ್ಲಿರುವ ಮನೆಯು ಸ್ವಂತ ಮನೆ ಎಂದರೆ ಸಾಕ್ಷಿಯು ಬಾಡಿಗೆ ಮನೆ ಎಂದು ನುಡಿಯುತ್ತಾರೆ. ಸದರಿ ಮನೆಯು ಸ್ವಂತ ಮನೆಯಾಗಿದ್ದು ಬಾಡಿಗೆ ಮನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೈಸೂರು ತಾಲ್ಲೂಕಿನಲ್ಲಿ ನನ್ನ ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಈ ಬಗ್ಗೆ ಮೈಸೂರು ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಹಾಗೂ ನನ್ನ ಕುಟುಬಕ್ಕೆ ಸಾಕಷ್ಟು ವರಮಾನ ಇರುತ್ತದೆ ಎಂದರೆ ಸರಿಯಲ್ಲ.

ಎಂ.ಸಿ.ಸಂಖ್ಯೆ 5/2021 ರಲ್ಲಿ ನಾನು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ತಕರಾರನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸಾಕ್ಷಿಗೆ ಈಗ ಎಂ.ಸಿ. ಸಂಖ್ಯೆ 5/2021 ರಲ್ಲಿನ ತಕರಾರಿನ ದೃಡೀಕೃತ ನಕಲು ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಅರ್ಜಿದಾರರ ಪರವಾಗಿ ನಿಪಿ.5 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ತಿಂಗಳಿಗೆ ರೂ.7,000/- ಮಧ್ಯಕಾಲೀನ ಜೀವನಾಂಶ ನೀಡಬೇಕೆಂದು ಆದೇಶ ಆಗಿತ್ತು ಎಂದರೆ ಸರಿ. ಸಾಕ್ಷಿಗೆ ಈಗ ಎಂ.ಸಿ. ಸಂಖ್ಯೆ 5/2021 ರಲ್ಲಿನ ಅರ್ಜಿ ಮೇಲಿನ ಆದೇಶದ ದೃಡೀಕೃತ ನಕಲು ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಅರ್ಜಿದಾರರ ಪರವಾಗಿ ನಿಪಿ.6 ಎಂದು ಗುರುತಿಸಲಾಯಿತು. ಜೀವನಾಂಶ ಆದೇಶ ಆದ ನಂತರ ನಾನು ಅರ್ಜಿದಾರರಿಗೆ ಕೊಲೆ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ. ಆ ಕಾರಣಕ್ಕಾಗಿ ಅರ್ಜಿದಾರರು ಎಂ.ಸಿ.ಸಂಖ್ಯೆ 5/2021 ರಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.